ಮತ್ತು ಸಿಟ್ಟನ್ನು ಗಮನಿಸಿದ ಮಹಾನಿರ್ದೇಶನಾಲಯದ ಮೂರನೆಯ ಸದಸ್ಯರ ಬಾಯಿಗೆ ತಂತಾನೆ ಬೀಗ ಬಿದ್ದಿತ್ತು.

★★★

ಬಿಸಿಲು ಮತ್ತು ಚಳಿ ಸಮಸಮ ಬೆರೆತ ಸುಂದರ ಮುಂಜಾವದು. ಎಂದಿನಂತೆ ಅರ್ಧ ತಾಸು ಮುಂಚಿತವಾಗಿಯೇ ಕಚೇರಿಗೆ ಬಂದಿದ್ದ ಡಾ. ಸತ್ಯಾರ್ಥಿ ಚಟರ್ಜಿ ಅವರು ಇನ್ನೆರಡು ದಿನಗಳಲ್ಲೇ ತಮ್ಮ ನಿವೃತ್ತಿ ಇದ್ದ ಕಾರಣ ಯಾವ ಕೆಲಸವೂ ಪೆಂಡಿಂಗ್ ಉಳಿಯಬಾರದು ಎಂದು ಕ್ಷಣ ಬಿಡುವಿಲ್ಲದೆ ಕೆಲಸದಲ್ಲಿ ತೊಡಗಿದ್ದರು. ಸ್ವಲ್ಪ ಹೊತ್ತು ಕಳೆಯುವುದರೊಳಗಾಗಿ ಕೈಯಲ್ಲಿ ಪತ್ರವೊಂದನ್ನು ಹಿಡಿದುಕೊಂಡು ಬಂದ ಸ್ಟೆನೋ ಪಟಿಹಾ ಮುಖದ ತುಂಬ ಮುಗುಳುನಗೆ ತುಂಬಿಕೊಂಡು, 'ಸರ್, ಮೇ ಐ ಕಮಿನ್' ಎಂದು ರಾಗಬದ್ಧವಾಗಿ ಕೇಳಿದಾಗ ತಲೆ ಮೇಲೆತ್ತಿ ನೋಡಿದರು ಅವರು. 'ಯಾಕಮ್ಮಾ, ಎನ್‌ಸಮಾಚಾರ, ಭಾರಿ ಮುಗುಳ್ನಗ್ತಿದ್ದೀಯಾ, ನಿನಗೇನಾದರೂ ಲವ್ ಲೆಟರ್ ಬಂತಾ? ಇಲ್ಲ, ಏನಾದ್ರೂ ಲಾಟರಿ ಹೊಡೀತಾ? ಇಷ್ಟೊಂದು ಖುಷಿಯಲ್ಲಿದ್ದೀ?' ಎನ್ನುತ್ತಿರುವಂತೆಯೇ ತನ್ನ ಕೈಯಲ್ಲಿದ್ದ ಪತ್ರವನ್ನು ಅವಳು ನಿರ್ದೇಶಕರ ಕೈಗೆ ವರ್ಗಾಯಿಸಿದ್ದಳು. ಯಾವ ಉದ್ವೇಗವೂ ಇಲ್ಲದ ಮನಃಸ್ಥಿತಿಯಲ್ಲಿ ಡಾ. ಸತ್ಯಾರ್ಥಿ ಚಟರ್ಜಿ ಆ ಪತ್ರದ ಮೇಲೆ ಕಣ್ಣಾಡಿಸತೊಡಗಿದರು. ಅದರಲ್ಲಿತ್ತು ಒಕ್ಕಣೆ – 'ಕೇಂದ್ರ ನಿರ್ದೇಶಕರಿಂದ ಬಂದ ವಿವರಣೆಯನ್ನು ಕಾಳಜೀಪೂರ್ವಕವಾಗಿ ಮತ್ತು ಕಾನೂನಾತ್ಮಕವಾಗಿ ಪರಿಶೀಲಿಸಲಾಗಿದ್ದು, 'ಶಾಲೆಗೆ ಬಂತು ಹುಲಿ' ಕಾರ್ಯಕ್ರಮಕ್ಕಾಗಿ ಘರ್ಜಿಸಿದ ಹುಲಿಯು ಯಾವುದೇ ರೀತಿಯ ಗೌರವಧನಕ್ಕಾಗಿ ಅಪೇಕ್ಷೆ ಪಟ್ಟಿಲ್ಲವಾದ ಕಾರಣ, ಅದಕ್ಕೆ ಒಪ್ಪಂದ ಪತ್ರ (ಕಾಂಟ್ರ್ಯಾಕ್ಟ್) ನೀಡುವುದು ಅಗತ್ಯವಿಲ್ಲವೆಂದು ವಿನಾಯತಿ ನೀಡಲಾಗಿದೆ. ಹಾಗೂ ಕೇಂದ್ರದ ನಿರ್ದೇಶಕರು ಕೊಟ್ಟ ವಿವರಣೆಯನ್ನು ಆಡಿಟ್ ಆಫೀಸರ್ ಅವರು ಸಂಪೂರ್ಣ ಒಪ್ಪಿದ್ದು, ಆ ಹಿನ್ನೆಲೆಯಲ್ಲಿ ಅವರು ಈ ಮೊದಲು ಎತ್ತಿದ್ದ ಆಕ್ಷೇಪಣೆಯನ್ನು ಕೈಬಿಡಲಾಗಿದೆ'.

ತಮಗೆ ಸಂಬಂಧವೇ ಇಲ್ಲವೇನೋ ಎಂಬಂಥ ನಿರ್ಲಿಪ್ತ ಮನೋಭಾವದಿಂದ, ಮಹಾನಿರ್ದೇಶನಾಲಯದ ಆ ಪತ್ರವನ್ನು ಫೈಲ್ ಮಾಡಲು ಪಟಿಹಾಳ ಕೈಗೆ ಕೊಟ್ಟ ಡಾ. ಸತ್ಯಾರ್ಥಿ ಚಟರ್ಜಿ ಅವರು, ನಿವೃತ್ತಿಯ ಮುಂಚಿನ ತಮ್ಮ ಕೆಲಸ ಕಾರ್ಯಗಳನ್ನು ಮಾಡಿ ಮುಗಿಸುವಲ್ಲಿ ಮಗ್ನರಾದರು. ಅದು ಮಳೆಗಾಲವಾಗಿರಲಿಲ್ಲವಾದರೂ ಬಂಗಾಲ ಕೊಲ್ಲಿಯಲ್ಲಿ ಉಂಟಾದ ಚಂಡಮಾರುತದಿಂದಾಗಿ ಎದ್ದ ದಟ್ಟವಾದ ಮೋಡಗಳು ಇಡೀ ಕಲ್ಕತ್ತಾ ನಗರವನ್ನು ಕತ್ತಲಗವಿಸಿಬಿಟ್ಟಿದ್ದವು. ಅದರ ಪರಿಣಾಮವಾಗಿ ಹೊರಗಡೆ ಧೋ ಧೋ ಎಂದು ಬಿಟ್ಟೂಬಿಡದೆ ಸುರಿಯುತ್ತಿದ್ದ ಮಳೆ ನಗರದ ಹವಾಮಾನವನ್ನು ಅಗತ್ಯಕ್ಕಿಂತ ಹೆಚ್ಚಾಗಿಯೇ ತಂಪಾಗಿಸಿತ್ತು.

---

**ಬಸವರಾಜ ಸಾದರ**

ಆಕಾಶವಾಣಿಯಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರು. 'ತಪ್ಪದಂಡ' (ಕಥಾಸಂಕಲನ), 'ಸಿಸಿಫಸ್‌ರ ಸುತ್ತು', 'ಬುದ್ಧನ ಭಿಕ್ಷಾಪಾತ್ರೆ' (ಕವನ ಸಂಕಲನಗಳು), 'ಅನುಮಿತಿ' (ವಿಮರ್ಶೆ), 'ಮೃದುವಾಗಿ ಮುಟ್ಟು', 'ತಮಂಧಕ್ಕೆ ಬೆಳಗು', 'ಹೊಸ ಆಲೋಚನೆ' (ವೈಚಾರಿಕ ಪ್ರಬಂಧಗಳ ಸಂಗ್ರಹಗಳು) – ಅವರ ಕೆಲವು ಕೃತಿಗಳು. 'ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು' ಅವರ ಪಿಎಚ್.ಡಿ. ಪ್ರಬಂಧವಾಗಿದೆ.